# ದಿನೇಶ್ ದಿಗ್ದರ್ಶನದ ಹೊಸ ಸಾಹಸ

■ ವಿಶಾಖ ಎನ್.



ಗೋವಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಭಾರತೀಯ ಪನೋರಮಾ ನಾನ್–ಫೀಚರ್ ವಿಭಾಗದಲ್ಲಿ ದಿನೇಶ್ ನಿರ್ದೇಶನದ 'ಮಧ್ಯಂತರ' ಆಯ್ಕೆಯಾಗಿದೆ.

ಸಿನಿಮಾ ಕನವರಿಕೆ ನೇವರಿಸುವವರದ್ದೇ ಸಿನಿಮೀಯ ಕಥೆ. ದಿನೇಶ್ ಶೆಣೈ ಅವರ ಕಥೆಯೂ ಅಂಥದ್ದೇ.

ಬಂಟ್ವಾಳದ ದಿನೇಶ್ ಅವರಿಗೀಗ 54 ವರ್ಷ. ಸಿನಿಮಾ ಹುಚ್ಚು ಹತ್ತಿಸಿಕೊಂಡು ದೆಹಲಿಯಲ್ಲಿನ ಖಾಸಗಿ ಸಂಸ್ಥೆಯಲ್ಲಿ ಆರು ತಿಂಗಳ ಕೋರ್ಸ್ ಮಾಡಿದ ಅವರು ಅಲ್ಲಿಯೇ ಕಾರ್ಪೊರೇಟ್ ಹಾಗೂ ಜಾಹೀರಾತು ಚಿತ್ರಗಳನ್ನು ತಯಾರಿಸಿಕೊಂಡು ಇದ್ದುಬಿಟ್ಟರು. ಈ ಕಲಾಮಾಧ್ಯಮದ ಪ್ರೀತಿ ಮಾತ್ರ ಕಡಿಮೆಯಾಗಲಿಲ್ಲ. ಕೋವಿಡ್ ಕಾಲದಲ್ಲಿ ಯಾರು ಯಾರೋ ಯೂಟ್ಯೂಬ್‌ನಲ್ಲಿ ಚಿಕ್ಕಪುಟ್ಟ ವಿಡಿಯೊಗಳನ್ನು ಹಾಕುತ್ತಿರುವುದನ್ನು ಗಮನಿಸಿದ ಅವರ ತಲೆಯೊಳಗೆ ಗುಂಗಿಹುಳ ಕೊರೆಯತೊಡಗಿತು. ಅದಕ್ಕೇ ತಾವೂ ಒಂದು ಚಿತ್ರಕಥೆ ಸಿದ್ಧಪಡಿಸಿದರು.



ದಿನೇಶ್ ಶೆಣೈ

1976ರಿಂದ 1985ರ ಅವಧಿಯಲ್ಲಿ ಇಬ್ಬರು ಸಿನಿಮಾ ಮೋಹಿಗಳು ಚಲನಚಿತ್ರವನ್ನು ನೋಡುವ ಹುಚ್ಚಿನಿಂದ ಮಾಡುವ ಹುಚ್ಚಿನೆಡೆಗೆ ಬದಲಾಗುವ ಅನಿರೀಕ್ಷಿತ ಕಥನಗಳನ್ನು ಹುದುಗಿಸಿಕೊಂಡ ಚಿತ್ರಕಥೆ ಅದು. ಅದೇ ಈಗ 'ಮಧ್ಯಂತರ' ಎಂಬ ಹೆಸರಿನ 39 ನಿಮಿಷಗಳ ಕಿರುಚಿತ್ರವಾಗಿ ಮೂಡಿದೆ. ಗೋವಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಭಾರತೀಯ ಪನೋರಮಾ ನಾನ್–ಫೀಚರ್ ವಿಭಾಗದಲ್ಲಿ ಪ್ರದರ್ಶನಕ್ಕೆ ಆಯ್ಕೆಯಾಗಿದೆ.

ದಿನೇಶ್ ಇಂಥದೊಂದು ಕಿರುಚಿತ್ರ ಮಾಡಲು ಹೊರಟಾಗ ಅವರಲ್ಲಿ ಬಂಡವಾಳವೇನೂ ಇರಲಿಲ್ಲ. ಅದಕ್ಕೇ ಆಪ್ತೇಷ್ಟರು, ಸ್ನೇಹಿತರು, ಬಂಧುಗಳಲ್ಲಿ 'ಕ್ರೌಡ್ ಫಂಡಿಂಗ್' ಮಾಡಿದರು. ಚಿತ್ರದ ಕಥೆ ಹಳತಾದ್ದರಿಂದ ಅದನ್ನು 60 ಎಂಎಂ ಕ್ಯಾಮೆರಾ ಬಳಸಿಯೇ ಚಿತ್ರೀಕರಿಸಿದರೆ ರಿಯಲಿಸ್ಟಿಕ್ ಆಗಿ ಇರುತ್ತದೆ ಎನಿಸಿತು. 'ತಿಥಿ' ಸಿನಿಮಾ ನಿರ್ದೇಶಕ ರಾಮ್‌ರೆಡ್ಡಿ ಅವರು 60 ಎಂಎಂ ಕ್ಯಾಮೆರಾ ಬಳಸಿಯೇ ಇಂಗ್ಲಿಷ್‌ನಲ್ಲಿ ಒಂದು ಸಿನಿಮಾ ಚಿತ್ರೀಕರಿಸುತ್ತಿದ್ದರು. ಹಿಂದಿ ನಟ ಮನೋಜ್ ವಾಜಪೇಯಿ ಅದರಲ್ಲಿ ನಟಿಸಿದ್ದರು. ಅದರ ಸಿನಿಮಾಟೊಗ್ರಫರ್ ಸುನಿಲ್ ಬೋರ್ಕರ್. ಗಣೇಶ್ ಶೆಟ್ಟಿ ಎಂಬುವವರು ದಿನೇಶ್ ಅವರ ಹಳೆಯ ಸ್ನೇಹಿತ. ಆ ಚಲನಚಿತ್ರದ ಕಾರ್ಯನಿರ್ವಾಹಕ ನಿರ್ಮಾಪಕ ಆಗಿದ್ದರು. ಹೀಗಾಗಿ ಅವರ ನೆರವಿನಿಂದ ಉಚಿತವಾಗಿ 60 ಎಂಎಂ ಕ್ಯಾಮೆರಾ ಹಾಗೂ ರೀಲ್ ಸಿಕ್ಕಿತು.

ಬೆಂಗಳೂರು, ಹೆಸರಘಟ್ಟ, ಕಂಠೀರವ ಸ್ಟುಡಿಯೊ, ಪಾಂಡವಪುರದ ಒಂದು ಥಿಯೇಟರ್... ಇಲ್ಲೆಲ್ಲ 11 ದಿನಗಳ ಕಾಲ ಚಿತ್ರೀಕರಣ ನಡೆಸಿದರು. ಆದರೆ, ರೀಲ್‌ನ ಪ್ರೊಸೆಸಿಂಗ್ ಹಾಗೂ ಸ್ಕ್ಯಾನಿಂಗ್‌ಗೆ ಹೆಚ್ಚು ಹಣ ವ್ಯಯಿಸಬೇಕಾಯಿತು. ಅದೇ ಕಾರಣಕ್ಕೆ ಅಂದುಕೊಂಡ ಬಜೆಟ್‌ಗಿಂತ ದುಪ್ಪಟ್ಟು ಬೇಕಾಯಿತು.

ಕ್ಲ್ಯಾಪ್‌ಬೋರ್ಡ್, ಹಳೆಯ ಕ್ಯಾಮೆರಾಗಳು, ಆ ದಶಕದ ವಸ್ತ್ರಗಳು, ಕೇಶವಿನ್ಯಾಸ ಎಲ್ಲವನ್ನೂ ಪಾತ್ರಗಳಿಗೆ ತುಂಬಿದ ಮೇಲೆ ಅಂದುಕೊಂಡಂತೆ 39 ನಿಮಿಷಗಳ ಕಿರುಚಿತ್ರ ತಯಾರಾಯಿತು. ದಾವಣಗೆರೆಯ ವೀರ್ ಎನ್ನುವ ಯುವಕ ಈ ಚಿತ್ರದ ಮುಖ್ಯಪಾತ್ರಧಾರಿ. ಇನ್ನೊಂದು ಪ್ರಮುಖ ಪಾತ್ರದಲ್ಲಿ ರಂಗಭೂಮಿಯ ನಂಟಿರುವ ಹಾಗೂ ನೀನಾಸಂ ಪದವೀಧರ ಆದ ಅಜಯ್ ನೀನಾಸಂ ಎಂಬುವವರು ಅಭಿನಯಿಸಿದ್ದಾರೆ. ರಮೇಶ್ ಪಂಡಿತ್, ಗಣೇಶ್ ಶೆಣೈ, ಶಿವು ನೀನಾಸಂ, ಶ್ರೀನಿವಾಸ್ ಅಡಪರ ಸಹೋದ್ಯೋಗಿ ರಾಜ್‌ಕುಮಾರ್ ಶ್ರೀನಿವಾಸ್ ಇತರ ಪಾತ್ರಧಾರಿಗಳು.

ಮುಂಬೈನಲ್ಲಿರುವ ಕನ್ನಡಿಗ ನವೀನ್ ಶೆಟ್ಟಿ ಈಗ ದೇಶದಲ್ಲೇ ಹೆಸರುವಾಸಿಯಾದ ಕಲರಿಸ್ಟ್. ಅವರು ದಿನೇಶ್ ಶೆಣೈ ಅವರ 'ಮಧ್ಯಂತರ' ಸಿನಿಮಾದ ರೀಲುಗಳನ್ನು ನೋಡಿದ ಮೇಲೆ ಅದಕ್ಕೆ ತುಂಬ ಕಡಿಮೆ ಬೆಲೆಯಲ್ಲಿ ಕಲರ್ ಗ್ರೇಡಿಂಗ್ ಮಾಡಿಕೊಡಲು ಒಪ್ಪಿದ್ದನ್ನು ಕಂಡು ದಿನೇಶ್ ಅವರ ಖುಷಿ ಇಮ್ಮಡಿಯಾಗಿದೆ.

'ಇಪ್ಪತ್ತಾರು ವರ್ಷಗಳಿಂದ ಸಿನಿಮಾ ತಂತ್ರಜ್ಞಾನದ ಹಲವು ಸಂಗತಿಗಳನ್ನು ಕಲಿತಿದ್ದೆ. ಐವತ್ತನಾಲ್ಕರ ಈ ವಯಸ್ಸಿನಲ್ಲಿ ಇಂಥದೊಂದು ಸಾಹಸಕ್ಕೆ ಇಳಿದೆ. ಹತ್ತು ತಿಂಗಳನ್ನು ಇದಕ್ಕೇ ವ್ಯಯಿಸಿರುವೆ. 60 ಎಂಎಂ ಕ್ಯಾಮೆರಾದಲ್ಲಿ ಶೂಟ್ ಮಾಡುವಾಗ, ಡಿಜಿಟಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸುವಾಗ ಅಗತ್ಯವಿರುವುದಕ್ಕಿಂತ ದುಪ್ಪಟ್ಟು ಲೈಟಿಂಗ್ ಬೇಕಾಗುತ್ತದೆ. ಅದಕ್ಕೂ ಅಂದುಕೊಂಡದ್ದಕ್ಕಿಂತ ಹೆಚ್ಚು ಹಣ ಖರ್ಚಾಯಿತು. ಗೋವಾದಲ್ಲಿ ನಮ್ಮ ಕಿರುಚಿತ್ರ ಪ್ರದರ್ಶಿತವಾದ ಮೇಲೆ ಅದಕ್ಕೆ ಒಂದಿಷ್ಟು ಮಾರುಕಟ್ಟೆ ಕುದುರೀತು ಎಂಬ ನಿರೀಕ್ಷೆ ಇದೆ. ಯಾರಾದರೂ ನಿರ್ಮಾಪಕರು ಮುಂದೆ ಬಂದರೆ ಇದನ್ನೊಂದು ಪೂರ್ಣ ಪ್ರಮಾಣದ ಚಲನಚಿತ್ರ ಆಗಿಸುವಷ್ಟು ವಸ್ತುವಿಷಯವೂ ನನ್ನಲ್ಲಿ ಇದೆ' ಎನ್ನುತ್ತಾರೆ ದಿನೇಶ್.

ಪ್ರತಿಕ್ರಿಯಿಸಿ: feedback@sudha.co.in